ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಮಂತ್ರಿಗಳು) :

ಅ) ಪ್ರತಿ ವರ್ಷವೂ ಡಿಸ್ಪೆಂಪರ್ ಮತ್ತು ಬಣ್ಣಗಳನ್ನು ಮಾಡಿಸುತ್ತಿಲ್ಲ.

ಆ) ಮೇಲಿನ ಉತ್ತರದಿಂದ ಪ್ರಶ್ನೆ ಉದ್ಭವಿಸುವುದಿಲ್ಲ

ಇ) ರಾಜಾಜಿನಗರದಲ್ಲಿರುವ ಸರ್ಕಾರಿ ವಸತಿಗೃಹಗಳ ನಿಯಮಾನುಸಾರವಾಗಿ ನಾಮಮಾತ್ರವಾದ ಬಾಡಿಗೆಯನ್ನು ವಿಧಿಸಿ ವಸೂಲುಮಾಡಲಾಗುತ್ತಿದೆ. ಹಾಗೂ ನಿರ್ವಹಣೆ ಕಾರ್ಯವನ್ನು ನಿಯಮದಂತೆ ನಿಗಧಿಪಡಿಸಿರುವ ಅನುದಾನಕ್ಕೆ ಒಳಪಟ್ಟು ಮಾಡಲಾಗುತ್ತಿದೆ.

ಈ) ರಾಜಾಜಿನಗರದಲ್ಲಿ ನಿರ್ಮಿಸಿರುವ ವರ್ಗದ ಮಾದರಿ ವಸತಿಗೃಹಗಳಿಗೆ, ನಿಯಮಾನುಸಾರವಾಗಿ ಒದಗಿಸಬೇಕಾಗಿರುವ ಸೌಲಭ್ಯಗಳನ್ನು ಈಗಾಗಲೇ ಒದಗಿಸಲಾಗಿದೆ.

ಉ) ಮೇಲಿನ (ಈ) ಉತ್ತರದ ಹಿನ್ನೆಲೆಯಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲ

**ರಾಜಾಜಿನಗರ ಸರ್ಕಾರಿ ವಸತಿ ಗೃಹಗಳ ಬಗ್ಗೆ.**

657 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

*ಅ) ರಾಜಾಜಿನಗರದ ವಸತಿಗೃಹಗಳು 25 ವರ್ಷಗಳಷ್ಟು ಹಳೆಯದಾಗಿದ್ದು, ಈಗಾಗಲೇ ವಸತಿಗೃಹಗಳ ನಿರ್ಮಾಣಕ್ಕೆ ತಗಲಿದ ವೆಚ್ಚವು ಈಗಾಗಲೇ ನಿವಾಸಿಗಳ ಬಾಡಿಗೆಯಿಂದ ವಸೂಲಾಗಿದ್ದು, ಸರ್ಕಾರವು ಕಾಲಕಾಲಕ್ಕೆ ಸರಿಯಾಗಿ ನಿರ್ವಹಣೆ ಮಾಡದೇ ದುಸ್ಥಿತಿಗೆ ಈಡಾಗಿರುವುದಿಂದ ಅವುಗಳನ್ನು ಅಲ್ಲಿಯ ನಿವಾಸಿಗಳಿಗೆ ಮಾರಾಟ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ?*

*ಆ) ಇದರಿಂದ ಸರ್ಕಾರಕ್ಕೆ ವರ್ಷ ವರ್ಷ ತಗಲುವ ವೆಚ್ಚವು ಉಳಿದಂತಾಗುವುದಿಲ್ಲವೇ?*

*ಇ) ಈ ಹಿಂದೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಬೆಂಗಳೂರು ನಗರ ಸಭೆಯವರು ನಿರ್ಮಿಸಿದ್ದು, ವಸತಿಗೃಹಗಳನ್ನು ಅಲ್ಲಿ ವಾಸವಾಗಿರುವ ನಿವಾಸಿಗಳಿಗೆ ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಈ) ಅದೇ ರೀತಿ ರಾಜಾಜಿನಗರದ ವಸತಿಗೃಹಗಳನ್ನು ಅಲ್ಲಿಯ ನಿವಾಸಿಗಳಿಗೆ ಮಾರಾಟ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?*

*ಉ) ಹಾಗಿದ್ದಲ್ಲಿ ರಾಜಾಜಿನಗರದ ವಸತಿಗೃಹಗಳನ್ನು ಅಲ್ಲಿಯ ನಿವಾಸಿಗಳಿಗೆ ಕಾಲ ಇರತಕ್ಕ ವರದಲ್ಲಿ ಮಾರಾಟ ಮಾಡುವುದರಿಂದ ಸರ್ಕಾರದ ಬೊಕ್ಕಸಕ್ಕೆ ಸಾಕಷ್ಟು ಹಣ ಆದಾಯವಾಗುವುದಿಲ್ಲವೇ. ಈ ಬಗ್ಗೆ ಸರ್ಕಾರದ ನಿರ್ಧಾರ [illegible]?*

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಮಂತ್ರಿ

ಅ) ಬೆಂಗಳೂರು ನಗರದಲ್ಲಿ ಈಗಾಗಲೇ ಹಲವಾರು ಸರ್ಕಾರಿ ನೌಕರರುಗಳು ಸರ್ಕಾರಿ ವಸತಿಗೃಹಗಳು ಇಲ್ಲದೆ ತೊಂದರೆ ಅನುಭವಿಸುತ್ತಿರುವುದರಿಂದ ಕಾಲಿ ಬೆಂಗಳೂರಿನಲ್ಲಿ ಇರುವ ಯಾವುದೇ ಸರ್ಕಾರಿ ವಸತಿಗೃಹಗಳನ್ನು ಮಾರಾಟ ಮಾಡುವ ಯಾವುದೇ ಪ್ರಸ್ತಾವನೆಯನ್ನು ಸರ್ಕಾರವು ಪರಿಗಣಿಸಿರುವುದಿಲ್ಲ.

ಆ) (ಅ) ಉತ್ತರದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಬೆಂಗಳೂರು ನಗರದಲ್ಲಿ ಸರ್ಕಾರಿ ಸಿಬ್ಬಂದಿಗೆ ವಸತಿಗೃಹಗಳ ಅಗಾಧ ಕೊರತೆ ಇರುವುದರಿಂದ ಸ್ವಾಯತ್ತ ಸಂಸ್ಥೆಗಳು ತೆಗೆದುಕೊಂಡಿರುವ ಕ್ರಮಗಳನ್ನು ಲೋಕೋಪಯೋಗಿ ಇಲಾಖೆಯ ಗಣನೆಗೆ ತೆಗೆದುಕೊಂಡಿಲ್ಲ.

ಈ) (ಇ) ಉತ್ತರದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ಸರ್ಕಾರದ ವಸತಿಗೃಹಗಳನ್ನು ಮಾರಾಟ ಮಾಡುವುದಿಲ್ಲ ಎಂಬ ನಿಲುವನ್ನು ಸರ್ಕಾರವು ತೆಗೆದುಕೊಂಡಿದೆ.

## ಆಳ ಸಮುದ್ರದಲ್ಲಿ ವಿದೇಶಿ ಹಡಗುಗಳಲ್ಲಿ ಮೀನುಗಾರಿಕೆ.

660 - ಶ್ರೀ ವಿಶ್ವೇಶ್ವರ ಹೆಗ್ಗಡೆ (ಅಂಕೋಲಾ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

*ಅ) ಸಮುದ್ರದಲ್ಲಿ ವಿದೇಶಿ ಹಡಗುಗಳು ಆಳ ಸಮುದ್ರದಲ್ಲಿಯೂ ಮೀನುಗಾರಿಕೆ ತೊಡಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರದ ಸ್ಪಷ್ಟ ನಿರ್ಧಾರವೇನು ?*

ಶ್ರೀ ಕೆ. ಜಯಪ್ರಕಾಶ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) 12(22 ಕಿ.ಮೀ.) ನಾಮಿಕ ಮೈಲು ಒಳಗಿನ ಪ್ರದೇಶದ ಮೀನುಗಾರಿಕೆ ವಿಷಯ ರಾಜ್ಯ ಸರ್ಕಾರಕ್ಕೆ ಸಂಬಂಧಿಸಿರುತ್ತವೆ. 12 ನಾಮಿಕ ಮೈಲಿನ ನಂತರದ ಸಮುದ್ರ ಪ್ರದೇಶದ ಮೀನುಗಾರಿಕಾ ಕಾರ್ಯವ್ಯಾಪ್ತಿ ಕೇಂದ್ರದ ಸ್ವಾಧೀನಕ್ಕೆ ಬರುತ್ತದೆ. ಆಳ ಸಮುದ್ರ ಮೀನುಗಾರಿಕೆ ಅವಕಾಶವನ್ನು ರಾಜ್ಯದ ಕರಾವಳಿ ಮೀನುಗಾರರಿಗೆ ಮೀಸಲಿಡಬೇಕೆಂದು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಒತ್ತಾಯ ತಂದಿದೆ.

## ಬೇಲೆಕೇರಿ ಬಂದರಿನ ಹೂಳೆತ್ತುವ ಕೆಲಸ.

661 - ಶ್ರೀ ಕೆ. ವಿಶ್ವೇಶ್ವರ ಹೆಗ್ಡೆ (ಅಂಕೋಲ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

*ಅ) ಅಂಕೋಲಾ ತಾಲ್ಲೂಕಿನಲ್ಲಿ ಬೇಲಿಕೇರಿ ಬಂದರಿನ ಹೂಳೆತ್ತುವ ಕೆಲಸ ಯಾವ ಹಂತದಲ್ಲಿದೆ ?*